(c) The work of the Land Reform Declaration enquiry is being conducted as the post has been filled up now.

ಶ್ರೀ ಕೆ. ರಾಮಭಟ್ :– ನಾನು ಈ ಪ್ರಶ್ನೆಯನ್ನು ಅಗಸ್ಟ್ ತಿಂಗಳಲ್ಲಿ ಕೇಳಿದ್ದು. ತಡವಾಗಿ ಯಾದರೂ ಸಹ ನೇಮಕ ಮಾಡಿದ್ದಾರೆ. ಅದರೆ ಈಗ ಅವರನ್ನು ಬೇರ್ಪಡಿಸಿ ಮಾಡಿದ್ದಾರೆ ಜೊತೆಗೆ ಬೆಳ್ತಂಗಡಿ ಮತ್ತು ಸೂಳ್ಯದಲ್ಲಿ ಸಹ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್‌ಗಳು ಇಲ್ಲ. ಈ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣವೇನು ?

† ಶ್ರೀ ಬಿ. ಬಸವಲಿಂಗಪ್ಪ :–ನಮ್ಮಲ್ಲಿ ಹಲವಾರು ಯೋಜನೆಗಳಿವೆ. ಆದರೆ ಸಾಕಷ್ಟು ಮಂದಿ ಅಸಿಸ್ಟೆಂಟ್ ಕಮೀಷನರ್‌ಗಳು ನಮ್ಮಲ್ಲಿ ಇಲ್ಲ. ಇವರನ್ನು ನೇಮಕ ಮಾಡುವುದು ನಿಧಾನವಾದ ಕಾರಣ ತೊಂದರೆಯಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಈಗ ಅಸಿಸ್ಟೆಂಟ್ ಕಮೀಷನರ್ ಅವರನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದೇವೆ. ಅವರು ಚಾರ್ಜ್ ತೆಗೆದುಕೊಂಡಿದ್ದಾರೆ.

ಶ್ರೀ ಕೆ. ರಾಮಭಟ್ :– ಈಗ ಪುತ್ತೂರಿನಲ್ಲಿರುವ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್ ಅವರು ಗೌರ್ನರ್ ಕಛೇರಿಗೆ ಅಂಡರ್–ಸೆಕ್ರೆಟರಿಯಾಗಿ ನೇಮಕವಾಗಿದ್ದಾರೆ. ಬೆಳ್ತಂಗಡಿಯಲ್ಲಿದ್ದವರನ್ನು ಗುಲ್ಬರ್ಗಕ್ಕೆ ವರ್ಗ ಮಾಡಲಾಗಿದೆ. ಸೂಳ್ಯದಲ್ಲಿ ಅಸಿಸ್ಟೆಂಟ್ ಕಮಿಷನರ್ ಅವರು ಇಲ್ಲದ ಕಾರಣ ಭೂಸುಧಾರಣಾ ರಿಜಿಸ್ಟ್ರೇಷನ್‌ಗಳ ತನಿಖೆಯು ವಿಳಂಬವಾಗಿದೆ. ಈ ಹುದ್ದೆಯನ್ನು ತಾವು ಜಾಗ್ರತೆ ಭರ್ತಿ ಮಾಡದಿದ್ದರೆ ಭೂಸುಧಾರಣೆಗೆ ಸಂಬಂಧಪಟ್ಟಂತೆ ಬಂದಿರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಲು ತೊಡಕು ಬರುತ್ತದೆ. ಆದಕಾರಣ ಮುಂದೆ ಬರುವಂತಹ ಸಮಸ್ಯೆಗಳಿಗೆ ಈಗಲೇ ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಸದಸ್ಯರ ತಕರಾರು ಏನಿದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರು ಹೇಳಿದಂತಹ ಸಮಸ್ಯೆಗಳನ್ನು ಅತಿ ಶೀಘ್ರವಾಗಿ ಪರಿಹಾರ ಮಾಡುವುದಕ್ಕೆ ನಾನು ಸೂಕ್ತ ಕ್ರಮ ತೆಗೆದುಕೊಂಡಿದ್ದೇನೆ. ಅಲ್ಲಿದ್ದ ಅಧಿಕಾರಿಗಳು ಬೇರೆ ಕಡೆಗೆ ವರ್ಗವಾಗಿದ್ದರೆ ಅಲ್ಲಿಗೆ ಬೇರೆ ಹೊಸಬರನ್ನು ನೇಮಕ ಮಾಡುತ್ತೇನೆ. ಎಲ್ಲೆಲ್ಲಿ ಟ್ರಿಬ್ಯುನಲ್‌ಗಳನ್ನು ಮಾಡಿಲ್ಲ ಅಂಥಾ ಕಡೆ ಈಗ ಮಾಡುತ್ತಿದ್ದೇವೆ.

Rural Electrification in Belur Taluk

86 SRI B.H. LAKSHMANAYYA (Belur).— Will the Chief Minister be pleased to state :—

(a) has Belur Taluk been included under Rural Electrification programme ;

(b) if so, how many villages have so far been electrified in this Taluk and how many requisitions have been received for electrification of villages ;

(c) is it true that in some villages poles have not been erected and conductor not strung and in some villages poles have been erected and conductor strung but electricity is not supplied ;

(d) if so, in how many villages the work is incomplete and when will be electricity supplied to these villages ;

(e) is it a fact that sanction of electricity supply has been refused to certain villages ; if so, what is the reasons for such refusal ?

SRI K.H. SRINIVAS (Minister of State for Youth Services and Information). [On behalf of SRI D. DEVARAJ URS (Chief Minister].—

(a) Yes.

(b) Out of 83 villages included under REC Scheme, 46 villages have been electrified upto the end of December 1978 and no further requisitions have been received for electrification of villages.

(c) Yes.

(d) 10 villages. They are expected to be electrified within 2-3 months time, subject to availability of certain materials.

(e) No.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಸ್ವಾಮಿ ನಾನು ಈ ಪ್ರಶ್ನೆಯನ್ನು ಕಳೆದ ಮೇ ತಿಂಗಳಲ್ಲಿ ಕೊಟ್ಟಿದ್ದೆ. ಈಗ ಇದಕ್ಕೆ ಉತ್ತರ ಅಚ್ಚಾಗಿ ಬಂದಿದೆ. ಈ ಪ್ರಶ್ನೆಗೆ ತಾವು ಕೊಟ್ಟಿರತಕ್ಕ ಉತ್ತರದಲ್ಲಿ ೮೩ ಹಳ್ಳಿಗಳ ಪೈಕಿ ೪೬ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗಿದೆಯೆಂದು ಹೇಳಿದ್ದೀರಿ. ಇನ್ನೂ ಕೆಲವು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಅಪೂರ್ಣವಾಗಿದೆಯೆಂದು ಹೇಳಿದ್ದೀರಿ. ಹಾಗೂ ೨೨ಕ್ಕೆ ಉತ್ತರವಾಗಿ ಹತ್ತು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಕೆಲಸ ಅಪೂರ್ಣವಾಗಿದೆಯೆಂದು ಹೇಳಿದ್ದೀರಿ. ಹಾಗಾದರೆ ಯಾವುದು ನಿಜ ? ಯಾವುದು ಸುಳ್ಳು? ಮತ್ತು ಈ ಕೆಲಸವನ್ನು ಇನ್ನು ಏರಡು ಮೂರು ತಿಂಗಳುಗಳಲ್ಲಿ ಮುಗಿಸುತ್ತೇವೆಂದು ಹೇಳಿದ್ದೀರಿ. ಕಳೆದ ವರ್ಷದ ಮೇ ತಿಂಗಳಿನಿಂದ ಇಲ್ಲಿಯವರೆಗೂ ಈ ಕೆಲಸ ಆಗಿಲ್ಲ. ತಾವು ಇನ್ನೆಷ್ಟು ಕಾಲದಲ್ಲಿ ವಿದ್ಯುತ್ತನ್ನು ಒದಗಿಸುವ ವ್ಯವಸ್ಥೆ ಮಾಡುತ್ತೀರಿ ?

† ಶ್ರೀ ಕೆ.ಎಚ್. ಶ್ರೀನಿವಾಸ್.—ಒಟ್ಟು ೮೩ ಹಳ್ಳಿಗಳಲ್ಲಿ ೧೯೭೮ನೇ ಮಾರ್ಚಿ ಕೊನೆಯವರೆಗೆ ೪೬ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡುವ ಕಾರ್ಯ ಮುಕ್ತಾಯವಾಗಿದೆ. ಇನ್ನೂ ೩೭ ಹಳ್ಳಿಗಳ ಕೆಲಸ ಆಗಬೇಕು. ಆದರಲ್ಲಿ ಕೆಲವು ಹಳ್ಳಿಗಳ ಕೆಲಸ ನಡೆಯುತ್ತಿದೆ. ಕೆಲವು ಹಳ್ಳಿಗಳಲ್ಲಿ ಕಂಬಗಳನ್ನು ನಿಲ್ಲಿಸಿ ಮುಂದಿನ ಕೆಲಸ ಆಗದೇ ಇರುವ ಬಗ್ಗೆ ವಿವರಗಳನ್ನು ಕೊಟ್ಟಿದ್ದೇವೆ. ಕೆಲಸ ಆಗದೆ ಇರುವ ಹಳ್ಳಿಗಳು ಹತ್ತು ಎಂದು ಹೇಳಿದ್ದೇವೆ. ಅಂದಾಜು ಪ್ರಕಾರ ಈ ಒಂದು ಆರ್ಥಿಕ ವರ್ಷದ ಕೊನೆಯೊಳಗೆ ಎಂದರೆ ೧೯೭೯-೮೦ ರ ಕೊನೆಯೊಳಗೆ ಈ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುತ್ತೇವೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಮೈನ್ ಲೈನ್ ಇರುವ ಕಡೆ ಲೈನ್‌ಗಳನ್ನು ಹಾಕಬೇಕೆಂದು ಮಾನವಿಗಳನ್ನು ಕಳುಹಿಸಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದರ ಬಗ್ಗೆ ಏನು ಕ್ರಮಕ್ಕೆಗೊಳ್ಳುತ್ತೀರಿ ?

ಶ್ರೀ ಕೆ.ಎಚ್. ಶ್ರೀನಿವಾಸ್.—ಅದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಸರ್ಕಾರಕ್ಕೆ ಹೊಸದಾಗಿ ಯಾರೂ ಅರ್ಜಿಯನ್ನು ವಿದ್ಯುಚ್ಛಕ್ತಿ ಸರಬರಾಜಿಗಾಗಿ ಕೊಟ್ಟಿಲ್ಲ, ಹಾಗೂ ಮನವಿಯನ್ನು ಕಳುಹಿಸಿಲ್ಲವೆಂದು ಹೇಳಿದ್ದೀರಿ. ಈಗಾಗಲೇ ಅವರು ಸಾಕಷ್ಟು ಮನವಿಗಳನ್ನು ಕಳುಹಿಸಿದ್ದಾರೆ. ನಮ್ಮ ಹಳ್ಳಿಗೆ ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ಬಿ.ಡಿ.ಒ. ಗಳ ಮುಖಾಂತರ ಅರ್ಜಿಗಳನ್ನು ಕಳುಹಿಸಿರುತ್ತಾರೆ. ತಾವು ಹೇಳಿರತಕ್ಕ ಉತ್ತರ ಸರಿಯಲ್ಲ ಎಂದು ನನ್ನ ಭಾವನೆ. ಇದಕ್ಕೆ ತಮ್ಮ ಉತ್ತರವೇನು ?

ಶ್ರೀ ಕೆ.ಎಚ್. ಶ್ರೀನಿವಾಸ್.—ನನ್ನ ಮುಂದೆ ಇರತಕ್ಕ ವರದಿಯ ಪ್ರಕಾರ ಅಂಥ ಯಾವ ಅರ್ಜಿಗಳೂ ಬಂದಿಲ್ಲ. ತಾವು ಇಂತಹ ದಿನಾಂಕ ಕಳುಹಿಸಿದ್ದೇವೆಂದರೆ ತಮ್ಮ ಮಾತಿನಲ್ಲಿ ವಿಷಯ ಇದೆ. ತಮ್ಮಲ್ಲಿರುವ ವಿವರಗಳನ್ನು ನನಗೆ ಕಳುಹಿಸಿಕೊಟ್ಟಲ್ಲಿ ಸೂಕ್ತ ಕ್ರಮಕ್ಕೆಗೊಳ್ಳುತ್ತೇನೆ.